ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 73-78
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಹೊಸದುರ್ಗ ತಾಲೂಕಿನ ಪಾಳೆಯಗಾರರ ಕಾಲದ ಆಡಳಿತ ವ್ಯವಸ್ಥೆ

**ಡಾ. ವಿವೇಕಾನಂದ ಕೆ. ಆರ್**
ಅತಿಥಿ ಉಪನ್ಯಾಸಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ.

**Abstract:**
*ಆಡಳಿತ ವ್ಯವಸ್ಥೆಯು ಒಂದು ಸಾಮ್ರಾಜ್ಯದ ಅಸ್ಥಿಪಂಜರವಿದ್ದಂತೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಕಂಡುಬರುವ ಪ್ರಬಲ ಸಾಮ್ರಾಜ್ಯಗಳಲ್ಲಿ ಒಂದಾದ ವಿಜಯನಗರ ಸಾಮ್ರಾಜ್ಯವು ತೆಲುಗು, ತಮಿಳು, ಕನ್ನಡ ಹಾಗೂ ತುಳು ಭಾಷಾ ಪ್ರದೇಶಗಳನ್ನೊಳಗೊಂಡಂತೆ ನಾಲ್ಕು ಭಾಷಾ ಪ್ರಾದೇಶಿಕತೆಯಲ್ಲಿ ಹಂಚಿಹೋಗಿತ್ತು ಆಯಾ ಪ್ರದೇಶದಲ್ಲಿ ಪ್ರಚಲಿತವಿದ್ದ ಬೇರೆ ಬೇರೆ ತೆರನಾದ ಆಡಳಿತ ವಿಭಾಗ ಕ್ರಮಗಳನ್ನು ಕ್ರೂಢಿಕರಿಸಿ ಒಂದು ಸಾಮಾನ್ಯವಾದ ಆಡಳಿತ ವ್ಯವಸ್ಥೆಯನ್ನು ಜಾರಿಗೆತರಲಾಗಿತ್ತು. ವಿಜಯನಗರ ಅರಸರ ಅಮರನಾಯಂಕರ ವ್ಯವಸ್ಥೆಯಲ್ಲಿ ಪ್ರಮುಖವಾಗಿ ಕಂಡುಬರುವ ಹೊಸದುರ್ಗ ತಾಲೂಕಿನ ಪಾಳೆಯಗಾರರು ಈ ವ್ಯವಸ್ಥಯಡಿ ತಮ್ಮ ರಾಜಕೀಯ ಆಡಳಿತವನ್ನು ರಚಿಸಿಕೊಂಡಿದ್ದರ ಬಗ್ಗೆ ಈ ಲೇಖನದಲ್ಲಿ ಚರ್ಚಿಸಲಾಗಿದೆ.*

**Keywords:** *ದೇಶ, ಪಾಳೆಯಗಾರ, ರಾಜ್ಯ, ಚಾವಡಿ, ಮಗಣಿ, ವಳಿತ, ವೇಂಠೆ, ನಾಡು.*

### ಪೀಠಿಕೆ

ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸವೆಂಬ ಭಾವನೆ ಬಹು ಪ್ರಚಲಿತವಾಗಿದೆ; ಇತಿಹಾಸವನ್ನು ಚಿತ್ರಿಸುವ ಗ್ರಂಥಗಳಲ್ಲಿ ಈ ರಾಜಕೀಯ ಇತಿಹಾಸವೇ ಪ್ರಧಾನವಾಗಿದ್ದು ಗ್ರಂಥದ ಕೊನೆಯಲ್ಲಿ ಆ ನಾಡಿನ ಕಲೆ, ಧರ್ಮ ಇತ್ಯಾದಿಗಳನ್ನು ಕುರಿತ ವಿಷಯಗಳು ಒಂದು ಅನುಬಂಧದ ರೂಪದಲ್ಲಿರುವುದುಂಟು ಅಥವಾ ಅವುಗಳನ್ನು ನಿರೂಪಿಸುವ ಒಂದೆರೆಡು ಅಧ್ಯಾಯಗಳು ಬಂದಿರುವುದುಂಟು. ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ ಬದುಕಿದ ಜನ. ಹೀಗೆ ಬದುಕಿದ ಜನರ ಒಂದು ಗಣನೀಯವಾದ ಭಾಗ ಆ ನಾಡನ್ನಾಳಿದ ರಾಜಸಮೂಹ. ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನದ ಸಮಸ್ಯೆಗಳು, ಜೀವನ ಮೌಲ್ಯಗಳು–ಇತ್ಯಾದಿಗಳ ವಿವರಣೆಯೇಯಾಗಿರುತ್ತದೆ. ಆ ಜನತೆಯ ಜೀವನವನ್ನು ಕುರಿತಾದ ಇಂತಹ ಅಧ್ಯಯನವೆಂದೂ ಕರೆಯಬಹುದು: ಹಾಗೆ ನೋಡಿದರೆ ಸಾಂಸ್ಕೃತಿಕ ಅಧ್ಯಯನ ಎನ್ನುವ ಉಕ್ತಿಯೇ ಹೆಚ್ಚು ಉಚಿತವಾದುದು.[1]

### ಆಡಳಿತ

ಪ್ರಾಚೀನರ ಪ್ರಕಾರ ರಾಜ್ಯ ಎನ್ನುವುದು ರಾಜನಿಗೆ ಸೇರಿದುದು, ಅದರ ರಕ್ಷಣೆ ಅವನ ಹೊಣೆ. ಸೋಮದೇವನ ನೀತಿವಾಕ್ಯಮೃತದ ಪ್ರಕಾರ ಪ್ರಜೆಗಳನ್ನು ರಕ್ಷಿಸದವನು ರಾಜನೇ ಅಲ್ಲ (ಸಕಿಂ ರಾಜಾ ಯೋನ ರಕ್ಷಿತಿ ಪ್ರಜಾಃ). ಪ್ರಜಾ ಪಾಲನೆಯೇ ರಾಜನ ನಿಜವಾದ ಯಜ್ಞವೆಂದೂ ಭಾವಿಸಿದ್ದರು

***Please cite this article as:*** ವಿವೇಕಾನಂದ ಕೆ. ಆರ್. (2023). ಹೊಸದುರ್ಗ ತಾಲೂಕಿನ ಪಾಳೆಯಗಾರರ ಕಾಲದ ಆಡಳಿತ ವ್ಯವಸ್ಥೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(1), 73–78.

(ಪ್ರಜಾಪಾಲನಂ ಹಿ ರಾಜ್ಞ:ಯಜ್ಞ). ಹೀಗೆ ರಾಜನಿರುವುದು ಪ್ರಜೆಗಳಿಗಾಗಿ, ಅವರ ಯೋಗಕ್ಷೇಮಕ್ಕಾಗಿ ಎಂಬ ಭಾವನೆ ಸಾರ್ವತ್ರಿಕವಾಗಿದ್ದಿತು[2] ಗ್ರಾಮಗಳ ಮತ್ತು ನಗರಗಳ ಮೊತ್ತವೇ ರಾಜ್ಯ ಎಲ್ಲಕ್ಕೂ ರಾಜನೇ ಅಧಿಪತಿ ಎಲ್ಲವೂ ಅವನ ಆಳ್ವಿಕೆಗೆ ಒಳಪಟ್ಟವು.[3]

'ಒಂದು ಗ್ರಾಮದ ಜೀವನವು ಆ ಗ್ರಾಮದ ದೇವಸ್ಥಾನದ ಸುತ್ತ ರೂಪಿತವಾಗುತ್ತಿದ್ದಂತೆ, ಒಂದು ದೇಶದ ಜನ ಜೀವನವು ಆ ದೇಶದ ರಾಜನನ್ನು ಅವಲಂಬಿಸಿದ್ದಿತ್ತು. ಅವನ ಏಳುಬೀಳುಗಳೇ ರಾಜ್ಯದ ಏಳುಬೀಳುಗಳು', ಇಡೀ ಪ್ರಪಂಚಕ್ಕೆ ಮಳೆ ಮತ್ತು ರಾಜ ಆಧಾರಭೂತಗಳಾಗಿವೆ.[4]

***'ಕಾವ್ಯವಲೋಕನ'ದ ಪದ್ಯವೊಂದು ಹೀಗೆ ಹೇಳುತ್ತದೆ.***

***'ಆರಯ್ಯೆ ಸರ್ವ ಭೂತಾ'***

***ಧಾರಂ ಮಳೆಯುಂ ನೃಪೇಂದ್ರನುಂ ಮಳೆಗಾಲಂ/***

***ಬಾರದೊಡಂ ನಿರ್ವಹಿಸುವ***

***ರಾರುಂ ನೃಪನಿಲ್ಲದಂದು ನಿರ್ವಹಿಸುವರೇ//.***[5]

ಅಂದರೆ, ಒಂದು ವೇಳೆ ಮಳೆಬಾರದಿದ್ದರೂ ಜನ ಹೇಗೋ ಜೀವನ ನಿರ್ವಹಿಸುತ್ತಾರೆ. ಆದರೆ ರಾಜನಿಲ್ಲದಿದ್ದರೆ ನಿರ್ವಹಿಸಲಾರರು ಎಂದರ್ಥ. ಈ ಪದ್ಯ ರಾಜ್ಯದ ಪ್ರಜೆಗಳಿಗೆ ರಾಜನ ಅವಶ್ಯಕತೆ ಎಷ್ಟೆಂಬುದನ್ನು ಸ್ಪಷ್ಟಪಡಿಸುತ್ತದೆ. ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಸಾಮ್ರಾಜ್ಯಗಳಿಂದ ಕೊಡುಗೆಯಾಗಿ ಪಡೆದ ರಾಜ್ಯ ವ್ಯವಸ್ಥೆಯು ವಿಜಯನಗರದ ಅರಸರ ಕಾಲದಲ್ಲಿ ಹೆಚ್ಚು ವ್ಯತ್ಯಾಸವಾಗಲಿಲ್ಲವೆಂದು ಹೇಳಬಹುದು. ಕೌಟಿಲ್ಯನ 'ಅರ್ಥಶಾಸ್ತ್ರ' ಮೊದಲಾದ ಪ್ರಾಚೀನ ಶಾಸ್ತ್ರಗ್ರಂಥಗಳು ಸೂತ್ರಿಸಿದ ತತ್ವಗಳ ಯಥಾನುಸರಣೆಯೇ ವಿಜಯನಗರ ರಾಜ್ಯಭಾರದ ವೈಶಿಷ್ಟ್ಯ. ಕೃಷ್ಣದೇವರಾಯನ ಸುಪ್ರಸಿದ್ಧ ಕೃತಿ 'ಅಮುಕ್ತಮೌಲ್ಯದ' ವಿಜಯನಗರದ ಅರಸರಿಗೆ ಆಡಳಿತದ ಕೈಪಿಡಿಯಾಗಿದ್ದಿತು.[6] ಪ್ರಸ್ತುತ ಅಧ್ಯಾಯದಲ್ಲಿ ಶಾಸನಗಳು, 'ಸಿರುಮನ ಸಾಂಗತ್ಯಗಳು' ಇತರೆ ಆನುಷಂಗಿಕ ಆಕರಗಳಲ್ಲಿ ಉಲ್ಲೇಖಿತವಾಗಿರುವ ಆಡಳಿತ, ಆರ್ಥಿಕ ಸ್ಥಿತಿ, ಧಾರ್ಮಿಕ ಸ್ಥಿತಿ, ಜನಜೀವನ ಚಿತ್ರಣ, ಸಹಗಮನ ಪದ್ಧತಿ ಇತ್ಯಾದಿ ಅಂಶಗಳನ್ನು ನೀಡಲಾಗಿದೆ.

**ಆಡಳಿತ ವಿಭಾಗಗಳು**

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಅರಸರ ಆಳ್ವಿಕೆ ವಿಶಿಷ್ಟ ಸ್ಥಾನವನ್ನು ಪಡೆದಿದೆ. ದಕ್ಷಿಣದ ನಾಲ್ಕೂ ಭಾಷೆ ಪ್ರದೇಶಗಳ ಬಹುಭಾಗವನ್ನು ಒಳಗೊಂಡಿದ್ದ ಅವರ ಸಾಮ್ರಾಜ್ಯದಲ್ಲಿ ಆಡಳಿತದ ಅನುಕೂಲಕ್ಕಾಗಿ ಹಲವು ಹಂತಗಳನ್ನು ಅವರು ರೂಪಿಸಿಕೊಂಡಿದ್ದರು. ಹೊಯ್ಸಳರ ನಂತರ ವಿಜಯನಗರದ ಅರಸರು ಈ ಪ್ರದೇಶಗಳನ್ನು ಆಳತೊಡಗಿದಾಗ, ಈ ಹಿಂದೆ ಆಯಾ ಪ್ರದೇಶದಲ್ಲಿ ಪ್ರಚಲಿತವಿದ್ದ ಬೇರೆ ಬೇರೆ ತೆರನಾದ ಆಡಳಿತ ವಿಭಾಗ ಕ್ರಮಗಳನ್ನು ಕ್ರೋಢಿಕರಿಸಿ ಒಂದು ಸಾಮಾನ್ಯೀಕರಣಗೊಂಡ, ಇಡೀ ಸಾಮ್ರಾಜ್ಯಕ್ಕೂ ಸೂಕ್ತವೆನಿಸಬಹುದಾದ ಪದ್ಧತಿಯೊಂದನ್ನು ಜಾರಿಗೆ ತರಬೇಕಾದ ಅಗತ್ಯವಿದ್ದಿತು.[7] ಈ ಹಿನ್ನಲೆಯಲ್ಲಿ ಮೂಡಿಬಂದ ಅವರ ಕಾಲದ ಆಡಳಿತ ವಿಭಾಗಗಳೆಂದರೆ ದೇಶ/ರಾಜ್ಯ, ಚಾವಡಿ/ಮಾಗಣಿ/ವಳಿತ/ವೇಂಠೆ, ನಾಡು/ಸೀಮೆ, ಸ್ಥಳ ಮತ್ತು ಗ್ರಾಮ ಎಂಬುದಾಗಿ ಗುರುತಿಸಲಾಗಿದೆ. ಇವುಗಳಿಗೆ ಪ್ರತ್ಯೇಕ ಆಡಳಿತಾಧಿಕಾರಗಳನ್ನು ನೇಮಿಸಿರುವ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಸಿರುಮನ ಸಾಂಗತ್ಯಗಳಲ್ಲಿ ದೇಶ, ರಾಜ್ಯ, ವಳಿತ, ನಾಡು, ಸೀಮೆ, ಗ್ರಾಮ, ಪಟ್ಟಣ ಎಂಬ ವಿಭಾಗಗಳ ಉಲ್ಲೇಖ ಕಂಡುಬರುತ್ತದೆ. ಪೆನುಗೊಂಡೆ ರಾಜ್ಯ, ಚಂದ್ರಗಿರಿ ರಾಜ್ಯವೆಂದು, ಹೊಯ್ಸಳ ದೇಶವೆಂದು, ಬೂದಿಹಾಳುನಾಡು, ಬೂದಿಹಾಳು ಸೀಮೆ, ಬಾಗೂರು ಸೀಮೆ, ಹಿರಿಯೂರು ಸೀಮೆ, ಎಕ್ಕಟಿ ಸೀಮೆ, ಲಕ್ಷಸೀಮೆಗಳೆಂದು, ಬಾಗೂರು ವಳಿತ, ಹೊಳಲ್ಕೆರೆ, ದುಮ್ಮಿ ವಳಿತಗಳು; ತಂಗಲಿ, ಮಚ್ಚೇರು, ಕಡವೂರು ಪಟ್ಟಣಗಳು, ಬೂದಿಹಾಳು ಸೀಮೆಯಲ್ಲಿ ಕುಲವಟಿ, ನೆರಲಕೆರೆ, ಹೆಗ್ಗೆರೆ, ಎಣ್ಣವಗೆರೆ,

ಬನದರಸದಹಳ್ಳಿ, ಮಾಳಪನಹಳ್ಳಿ, ಬೆಲಗೂರು, ಸಿಂಗಟಗೆರೆ, ಕಂಚಿಗಲ್ಲಿ, ಬೂದಿಹಳು, ಶ್ರೀಮೊಮಯಹಳ್ಳಿ, ತುಂಬಿನಕೆರೆ, ಶ್ರೀಚಿಕ್ಕೊಂಡನಹಳ್ಳಿ, ಯಡಗಟ್ಟ, ಉಕಮಾಪುರ, ಬೊಮ್ಮೇನಹಳ್ಳಿ, ಕೈಮರ, ಭೈರವದೇವ ಗುಡ್ಡ, ಕನ್ನೇಹಳ್ಳಿ, ಉಪ್ಪಿನಮಾಳೆ ನರಿಯಹಳ್ಳಿ, ಮೋಟನಹಳ್ಳಿ, ನಟ್ಟಕಲ್ಲು, ಕಲ್ಲಕೆರೆ ಮೊದಲಾದ ಗ್ರಾಮಗಳು ಅಂತರ್ಗತವಾಗಿದ್ದವೆಂದು ಶಾಸನಗಳಿಂದ ಗೊತ್ತಾಗುತ್ತದೆ.[8] ಹೀಗೆ ಆಡಳಿತ ವಿಭಾಗಗಳ ನಿದರ್ಶನ ಕಂಡುಬರುತ್ತದೆ.

ಬಾಗೂರು ಸೀಮೆಯ ಶಾಸನದಲ್ಲಿ ಅಚ್ಯುತರಾಯನು ವಿದ್ಯಾನಗರವನ್ನು ಆಳುತ್ತಿರುವಾಗ ಅವನ ಸಾಮಂತನಾಗಿದ್ದ ಪೆನುಗೊಂಡೆಯ ವೀರಪ್ಪಣನು ಅವನ ತಮ್ಮನಾದ ಹಿರಿಯ ಮಲ್ಲಪ್ಪಣ್ಣನ ಮೂಲಕ ನಿರೂಪವನ್ನು ಜಾರಿಗೊಳಿಸಿ, ಬಾಗೂರು ಸೀಮೆಯ ವಳಿತದಲ್ಲಿ ಮದುವೆ ಸುಂಕವನ್ನು ತೆಗೆದು ಹಾಕಿದನು. ಹಿರಿಯ ಬ್ರಾಹ್ಮಣರು, ಗೌಡ–ಶ್ಯಾನುಭೋಗ ಸೆಟ್ಟಿ–ಪಟ್ಟಣ ಸ್ವಾಮಿಗಳು–ಪ್ರಜೆಗಳು ಹಾಗೂ ಹಲವಾರು ಮಹಾಸ್ವಾಮಿಗಳ[9] ಉಲ್ಲೇಖವಿದೆ. ಕೃಷ್ಣಾಪುರಪೇಟೆ,[10] ಮಧುರೆ ಗ್ರಾಮ, ಅರಳಿಹಳ್ಳಿ, ಆದ್ರಿಕಟ್ಟೆ, ನಾಗೇನಹಳ್ಳಿ, ಕೃಷ್ಣಪುರ, ಕುಂದೂರು[11] ಮುಂತಾದ ಗ್ರಾಮಗಳ ಉಲ್ಲೇಖವಿದೆ. ಹಾಗೇ ಹೊಸದುರ್ಗದ ಸೀಮೆಗಳು ಚಿತ್ರದುರ್ಗ ಆಳ್ವಿಕೆಗೆ ಒಳಪಟ್ಟಿದ್ದವು. ಸಣ್ಣಕ್ಕಿ ಬಾಗೂರು, ಹೊಸದುರ್ಗ, ಜಾನಕಲ್ಲು, ದೇವಪುರ, ಬೂದಿಹಾಳು ಆಡಳಿತದ ವಿಭಾಗಗಳಾಗಿರುವುದನ್ನು ಗುರುತಿಸಬಹುದು. ಇವರ ಶಾಸನಗಳಲ್ಲಿ ಬಾಗೂರು ಚರಂತಿ, ಸೀಮೆ, ಹಾಗೂ ಕೆಲ್ಲೋಡು, ಕುರುಬರಹಳ್ಳಿ, ವೀರಪುರ, ರಂಗಪುರ, ಗುಂಡಪುರ[12] ರಲ್ಲಿ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ವಿಜಯನಗರ ಅರಸರಿಗೆ ಸಂಬಂಧಿಸಿದ ಸಾ.ಶ. 1555 ಹಾಗೂ ಸಾ.ಶ. 1578ರಲ್ಲಿ ದೊರಕುವ ಶಾಸನಗಳು ಸಹ ಬೂದಿಹಾಳು ಸೀಮೆಯು ಮಗರನಾಡು ವೇಂತೆಯದ ಹೊಯ್ಸಳ ರಾಜ್ಯದಲ್ಲಿ ಅಧೀನವಾಗಿತ್ತೆಂಬ ಅಂಶವನ್ನು ಸಮರ್ಥಿಸುತ್ತವೆ.[13] ವಿಜಯನಗರ ಕಾಲದಲ್ಲಿ ಬೂದಿಹಾಳು ಸೀಮೆ ಪೆನುಗೊಂಡ ರಾಜ್ಯದ ವಿಸ್ತಾರ ವಿಭಾಗದಲ್ಲಿ ಹೊಂದಿಕೊಂಡಿಬೇಕು, 'ವಳಿತ' ಎಂಬ ಸೀಮಾ ವಿಭಾಗವು ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಬಹುವಾಗಿ ಕಾಣಿಸಿಕೊಳ್ಳುತ್ತದೆ. ಆಂಧ್ರಪ್ರದೇಶದ ರಾಯಲಸೀಮೆಯ ಕನ್ನಡ ಶಾಸನಗಳಲ್ಲೂ 'ವಳಿತ' ವೆಂಬುದು ಕಾಣಿಸಿಕೊಳ್ಳುತ್ತದೆ. 'ವಳಿತ' ವೆಂಬುದಕ್ಕೆ ಮಂಡಲ, ರಾಜ್ಯ ಭಾಗ, ಸಾಮಂತ ಮಂಡಲವೆಂದೂ ಅರ್ಥಗಳಿವೆ. ಹೊಸದುರ್ಗ ಮತ್ತು ತಾಲೂಕುಗಳು ಸಂಧಿಸುವ ಪ್ರದೇಶವು ಈ ಸೀಮೆಯ ಭಾಗವಾಗಿದ್ದಿತೆಂದು ಸ್ಥೂಲವಾಗಿ ಹೇಳಬಹುದು. ಈ ಆಡಳಿತ ವಿಭಾಗವು ವಿಶೇಷವಾಗಿ ಕನ್ನಡ ಶಾಸನಗಳಲ್ಲಿ ಅದರಲ್ಲೂ ವಿಜಯನಗರ ಸಾಮ್ರಾಟರ ಕಾಲದಲ್ಲೇ ಅಧಿಕವೆಂದೂ ಗುರುತಿಸಲಾಗಿದೆ.[14]

ನಾಡು ಮತ್ತು 'ರಾಜ್ಯದ' ನಡುವೆ ಈ 'ವಳಿತ' ವೆಂಬ ವಿಭಾಗ ಕಂಡುಬರುತ್ತದೆ. 'ವಳಿತಕ್ಕೆ' 'ವೇಂತೆಯ' ಅಥವಾ 'ವೇಂತ' ಎಂಬ ಪರ್ಯಾಯ ಪದಗಳನ್ನು ಬಳಸಿರುವರೆಂತಲೂ, ಅದು 'ಸ್ಥಳ'ಕ್ಕಿಂತ ದೊಡ್ಡದು ಮತ್ತು ರಾಜ್ಯಕ್ಕಿಂತ ಚಿಕ್ಕದೆಂದೂ ಅಭಿಪ್ರಾಯವಿದೆ.[15] ಪ್ರಸ್ತುತ 'ಸಿರುಮಣ ನಾಯಕನ ಸಾಂಗತ್ಯ' ದಲ್ಲಿ ಬಾಗೂರು ವಳಿತ, ಹೊಳಲ್ಕೆರೆ ವಳಿತ, ದುಮ್ಮಿ ವಳಿತ ವೆಂಬ ಉಲ್ಲೇಖ ಕಂಡುಬರುತ್ತವೆ.[16] ಹೊಳಲ್ಕೆರೆಯ ಶಾಸನಗಳಲ್ಲಿ ಎಕ್ಕಟೀಯ ವಳಿತ,[17] ಬಾಗೂರು ವಳಿತ[18] ಉಲ್ಲೇಖಗೊಂಡಿವೆ. 'ವಳಿತ' ಅಥವಾ 'ವೇಂತೆಯ'ದೊಳಗೆ 'ನಾಡು'ಗಳು ಅಂತರ್ಗತವಾಗಿದ್ದವು. 'ನಾಡು'ಗಳನ್ನು 'ಸೀಮೆ' ಎಂದೂ ಸಹ ಕರೆಯುತ್ತಾರೆ.[19] 'ನಾಡು' ಎಂಬುದು ವಿಜಯನಗರ ಅರಸರ ಕಾಲದಲ್ಲಿ 'ಸೀಮೆ' ಎಂದು ಕಾಣಿಸಿಕೊಳ್ಳುತ್ತದೆ. 'ನಾಡು' ಎಂಬುದು ಕನ್ನಡ ಪ್ರದೇಶದಲ್ಲಿಯೂ, 'ಸೀಮೆ' ಎಂಬುದು ತೆಲುಗು ಪ್ರದೇಶದಲ್ಲಿಯೂ ವಿಶೇಷವಾಗಿ ಬಳಕೆಯಲ್ಲಿರುವುದು ಕಂಡುಬರುತ್ತದೆ.[20] ಅನೇಕ ಗ್ರಾಮಗಳನ್ನು ಸೇರಿಸಿ 'ಸೀಮೆ' ಎಂಬ ವಿಭಾಗವನ್ನಾಗಿಯೂ, ಅನೇಕ

ಸೀಮೆಗಳನ್ನು ಸೇರಿಸಿ 'ವೇಂಠೆ' ಎಂಬ ವಿಭಾಗವನ್ನಾಗಿಯೂ ಮತ್ತು ವೇಂಠೆಯನ್ನು ಸೇರಿಸಿ 'ಚಾವಡಿ' ಎಂಬ ವಿಭಾಗವನ್ನಾಗಿಯೂ ಮಾಡಿದ್ದರು.[21] ಶಾಸನಗಳಲ್ಲಿ 'ಬೂದಿಹಾಳು ಸೀಮೆ',[22] ಬಾಗೂರುಸೀಮೆ,[23] ರಾಮಗಿರಿಸೀಮೆ,[24] 'ನೀರಗುಂದ ಸೀಮಾ'[25] 'ಹಿರಿಯೂರುಸೀಮೆ', 'ದುಮ್ಮಿಸೀಮೆ'[26] 'ಹೊಳಲ್ಕೆರೆಸೀಮೆ'[27]ಉಲ್ಲೇಖವಿದೆ.

**ಬಯಕಾರ ರಾಮಪಯನ ಮಾಗಣಿ**

ಹೊಸದುರ್ಗ ತಾಲೂಕಿನ ಕಲ್ಕೆರೆ ಗ್ರಾಮದ ಶಾಸನವೊಂದರಲ್ಲಿ ಈ ಮಾಗಣಿ ಉಲ್ಲೇಖ ಬಂದಿದೆ. ಕಲ್ಲಕೆರೆ ಗ್ರಾಮವು ಈ ಮಾಗಣಿಗೆ ಸೇರಿದ ಬೂದಿಹಾಳು ಸೀಮೆಯ ಗ್ರಾಮವೆಂದು ಅದೇ ಶಾಸನದಿಂದ ತಿಳಿದುಬರುತ್ತದೆ. ಬೂದಿಹಾಳು ಸೀಮೆಯಲ್ಲಿ ಹಿರಿಯೂರು ಅಂತರ್ಗತವಾಗಿದ್ದಿತೆಂದು ಶಾಸನವೊಂದರಿಂದ ತಿಳಿದುಬರುತ್ತದೆ. ಈ ಮಾಗಣಿಯಲ್ಲಿ ಹೊಸದುರ್ಗ ಮತ್ತು ಹಿರಿಯೂರು ತಾಲೂಕುಗಳ ಅನೇಕ ಸೀಮೆಗಳು ಸಮಾವೇಶಗೊಂಡಿದ್ದಿರಬೇಕೆಂದು ಹೇಳಬಹುದು.[28]

**ಬಾಗೂರು ವಳಿತ/ಸೀಮೆ**

ಹೊಸದುರ್ಗ ಮತ್ತು ಹೊಳಲ್ಕೆರೆ ತಾಲೂಕುಗಳಿಗೆ ಸೇರಿದ ಅನೇಕ ಗ್ರಾಮಗಳಲ್ಲಿಯ ಶಾಸನಗಳಲ್ಲಿ ಈ ಪ್ರದೇಶದ ಉಲ್ಲೇಖ ಹೊಂದಿದೆ. ಹೊಸದುರ್ಗ ಮತ್ತು ಹೊಳಲ್ಕೆರೆ ತಾಲೂಕುಗಳಲ್ಲಿ ಸಮಾವೇಶಗೊಂಡಿರುವ ಶ್ರೀರಾಂಪುರ, ಹೊಸದುರ್ಗ, ಹೊಳಲ್ಕೆರೆ, ರಾಮಗಿರಿ ಹೋಬಳಿಗಳನ್ನೊಳಗೊಂಡಂತೆ ಚಿತ್ರದುರ್ಗ ನೈಋತ್ಯ ದಿಕ್ಕು ಅಂದರೆ ಚಿಕ್ಕಮಗಳೂರು ಜಿಲ್ಲೆಗೆ ಹೊಂದಿಕೊಂಡಿರುವ ಪ್ರದೇಶವು ಈ ಬಾಗೂರು ಸೀಮೆಯಲ್ಲಿ ಸಮಾವೇಶಗೊಂಡಿತ್ತು.[29]

**ಬೂದಿಹಾಳು ಸೀಮೆ**

ಹೊಸದುರ್ಗ ತಾಲೂಕಿನ ಶ್ರೀರಾಮಪುರದ ಹಿಂದಿನ ಹೆಸರು 'ಬೂದಿಹಾಳು' ಇದು ಬಯಕಾರ ರಾಮಪಯನ ಮಾಗಣಿಗೆ ಸೇರಿದ ಗ್ರಾಮವಾಗಿದ್ದಿತು ಕಲ್ಲಕೆರೆ, ಹಿರಿಯೂರು ಗ್ರಾಮಗಳು ಈ ಸೀಮೆಯ ಊರುಗಳು. ಹೊಸದುರ್ಗ ತಾಲೂಕಿನ ಶ್ರೀರಾಮಪುರ ಹೋಬಳಿಯ ಪ್ರದೇಶವು ಈ ಸೀಮೆಯಲ್ಲಿ ಸಮಾವೇಶಗೊಂಡಿದ್ದಿರಬಹುದು.

**ಮತ್ತನಡುವಿನ ಸೀಮೆ:**

ಹಾಲಪ್ಪ ನಾಯಕನ ಕಾಲದ ಶಾಸನವೊಂದರಲ್ಲಿ ಈ ಸೀಮೆಯ ಉಲ್ಲೇಖ ಹೊಂದಿದೆ. ಅರೇಹಳ್ಳಿ ಗ್ರಾಮವು ಈ ಸೀಮೆಯ ಗ್ರಾಮವೆಂದು ಅದೇ ಶಾಸನದಿಂದ ತಿಳಿದುಬರುತ್ತದೆ.[30] ಹೊಸದುರ್ಗ ತಾಲೂಕಿನ ಒಂದು ಹೋಬಳಿಯ ಕೇಂದ್ರ ಸ್ಥಳವಾಗಿರುವ ಮತ್ತೋಡು ಸ್ಥಳವೇ ಶಾಸನೋಕ್ತವಾಗಿರುವ 'ಮತ್ತನಡವಿನ' ಅಂದರೆ ಇಂದಿನ ಮತ್ತೋಡು ಹೋಬಳಿಗೆ ಸೇರಿದ ಬಹು ಭಾಗವು ಈ ಸೀಮೆಯಲ್ಲಿ ಅಂತರ್ಗತವಾಗಿದ್ದಿರಬೇಕು.

**ರಾಮಗಿರಿ ಸೀಮೆ**

ರಾಮಗಿರಿ ಸೀಮೆ ಇಂದಿನ ಹೊಳಲ್ಕೆರೆ ತಾಲೂಕಿನ ಹೋಬಳಿಯೊಂದರ ಕೇಂದ್ರಸ್ಥಳವಾಗಿದೆ. ಹೊನ್ನುಗೊಂಡನಹಳ್ಳಿ ಬಾಗೂರು ಗ್ರಾಮಗಳು ಈ ಸೀಮೆಯ ಅಂತರ್ಭಾಗವೆಂದು ಶಾಸನವೊಂದರಿಂದ ತಿಳಿಯಬಹುದು.[31] ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳು ಸಂಧಿಸುವ ಪ್ರದೇಶವು ಈ ಸಿಮೇಯ ಭಾಗವಾಗಿದ್ದಿತೆಂದು ಸ್ಥೂಲವಾಗಿ ಹೇಳಬಹುದು. ಹಾಗೇ 'ಸಿರುಮನ ಸಾಂಗತ್ಯಗಳು' 'ಸೀಮೆ' ಎಂಬುದುನ್ನು ಪ್ರಯೋಗಿಸುತ್ತವೆ. ಬೂದಿಹಾಳು, ಎಕ್ಕಟಿ, ಹಿರಿಯೂರು ಮೊದಲಾದ ಪಾಳೆಯಪಟ್ಟುಗಳನ್ನು 'ಸೀಮೆ' ಎಂದು ಕರೆಯಲಾಗಿದೆ. ಶಾಸನಗಳು ಈ ಹೇಳಿಕೆಗಳನ್ನು ಸಮರ್ಥಿಸುತ್ತವೆ. ವಿಜಯನಗರ ಅರಸರ ಕಾಲದಲ್ಲಿ ಈ'ನಾಡು' 'ಸೀಮೆ'ಗಳನ್ನು ಆಳುವವರನ್ನು 'ಪಾಳೆಯಗಾರ'ರೆಂದು ಕರೆಯುತ್ತಿದ್ದಿರಬಹುದು. ಬಾಗೂರು, ರಾಮಗಿರಿ, ಹಿರಿಯೂರು, ಹೊಳಲ್ಕೆರೆ, ದುಮ್ಮಿ, ಎಕ್ಕಟಿ, ಹೊನ್ನವಳ್ಳಿ, ಕಂದಿಕೆರೆ, ಹಾರನಹಳ್ಳಿ, ನಿಡುಗಟ್ಟು, ನೀರ್ಗುಂದ ಮೊದಲಾದವುಗಳು 'ಸೀಮೆ'

ಗಳಾಗಿದ್ದು ಬೇರೆ ಬೇರೆ ಪಾಳೆಯಗಾರರಿಂದ ಆಳಲ್ಪಡುತ್ತಿದ್ದವು. ಸೀಮೆ ಎಂಬುದು ಸಂಸ್ಕೃತದ 'ಸೀಮಾ' ಪದವೇ ಆಗಿದ್ದು ವಿಜಯನಗರ ಕಾಲದಲ್ಲಿ ಒಂದು ಆಡಳಿತ ವಿಭಾಗ ಎಂಬರ್ಥಲ್ಲಿ ಪ್ರಯೋಗವಾಗಿದೆ. ಆದರೆ ಸಾ.ಶ.1400 ಕ್ಕಿಂತ ಹಿಂದಿನ ಕನ್ನಡ ಶಾಸನಗಳಲ್ಲಿ ಸೀಮೆ ಎಂಬುದು ಎಲ್ಲೆ(Boundary) ಎಂಬ ಅರ್ಥದಲ್ಲೇ ಪ್ರಯೋಗವಾಗಿರುವುದು ಗಮನಾರ್ಹ ಸಂಗತಿ.[32] ಒಂದು ನಿರ್ಧಿಷ್ಟ ಪ್ರದೇಶ ಮತ್ತು ಕಾಲದಲ್ಲಿ ಆ ಪ್ರದೇಶದ ಪೂರ್ವಕಾಲದ ಪ್ರಾದೇಶಿಕ ವಿಭಾಗಗಳನ್ನು ಅಷ್ಟು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ, ಸಮಗ್ರವಾದ ವಿಶ್ಲೇಷಣೆ ಮತ್ತು ಸಂಶ್ಲೇಷಣೆಯನ್ನೊಳಗೊಂಡ ಅಧ್ಯಯನದಿಂದ ಮಾತ್ರ ಸ್ವಲ್ಪ ಮಟ್ಟಿಗಾದರೂ ಹೊಳಲ್ಕೆರೆ, ಹೊಸದುರ್ಗ, ಚಿಕ್ಕನಾಯಕನಹಳ್ಳಿಯ ಪ್ರಕಟಿತ ಶಾಸನಗಳನ್ನು ಆಧರಿಸಿ ಪಾಳೇಯಗಾರರ ಅವಧಿಯಲ್ಲಿ ಪ್ರಚಲಿತವಿದ್ದ ಹಲವಾರು ಪ್ರಾದೇಶಿಕ ವಿಭಾಗಗಳನ್ನು ಗುರುತಿಸುವ ಪ್ರಯತ್ನವಾಗಿದೆ.

**ಕೊನೆಟಿಪ್ಪಣಿ**


1. ಚಿದಾನಂದಮೂರ್ತಿ.ಎಂ. (2011). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150).* ಪು.1
2. ಅದೇ. ಪು.356.
3. ಅದೇ. ಪು.356.
4. ಅದೇ. ಪು.357.
5. ಅದೇ. ಪು.357.
6. ಶಿವಣ್ಣ ಕೆ ಎಸ್. (1976). *ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಅರಸರ ಆಳ್ವಿಕೆ.* ಇಲ್ಲಿ ಲಕ್ಷ್ಮಣ್ ತೆಲಗಾವಿ (ಸಂ.), *ಚಂದ್ರವಳ್ಳಿ.* ಪು.57.
7. ಕೃಷ್ಣಮೂರ್ತಿ.ಪಿ.ವಿ. (1999). *ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು.* ಪು.202.
8. ಶೈಜಲಾ ಹೊಸಳ್ಳೇರ. (2001). *ಬೂದಿಹಳು ಪಾಳೆಯಗಾರರು.* ಇಲ್ಲಿ ಎಂ.ವಿ. ವಸು. (ಸಂ.), *ದಕ್ಷಿಣ ಕರ್ನಾಟಕದ ಅರಸು ಮನೆತನಗಳು.* ಪು.133.
9. ರೈಸ್ ಬಿ.ಎಲ್. (1903). ಎಫಿಗ್ರಫಿಯಾ ಕರ್ನಾಟಿಕ. ಸಂಪುಟ.11, ಶಾಸನ ಸಂಖ್ಯೆ–111.
10. ಅದೇ. ಶಾಸನ ಸಂಖ್ಯೆ–112.
11. ಅದೇ. ಶಾಸನ ಸಂಖ್ಯೆ–113.
12. ಅದೇ. ಶಾಸನ ಸಂಖ್ಯೆ– 79–81, 90–92.
13. ರೈಸ್.ಬಿ.ಎಲ್. (1904). *ಎಫಿಗ್ರಫಿಯಾ ಕರ್ನಾಟಿಕ.* ಸಂಪುಟ 11, ಶಾಸನ ಸಂಖ್ಯೆ 6,
14. ಶೈಲಜಾ ಹೊಸಳ್ಳೇರ. (2018). *ಬೂದಿಹಾಳು ಸಿರುಮನಾಯಕ.* ಪು.453.
15. ವೆಂಕಟರತ್ನಂ ಎಂ.ವಿ. (1972). *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳಿಯ ಸರ್ಕಾರ.* ಪು. 23.
16. ಸಿರುಮಣನಾಯಕನ ಸಾಂಗತ್ಯ. ಪು. 1–105.
17. ರೈಸ್.ಬಿ.ಎಲ್. (1903). *ಪೂರ್ವೋಕ್ತ.* ಶಾಸನ ಸಂಖ್ಯೆ.132
18. ಅದೇ. ಪು.703, 133
19. ವೆಂಕಟರತ್ನಂ.ಎಂ.ವಿ. (1972). *ಪೂರ್ವೋಕ್ತ.* ಪು.22
20. ಅದೇ. ಪು.22
21. ಶಿವಣ್ಣ.ಕೆ.ಎಸ್. (1976). *ಪೂರ್ವೋಕ್ತ.* ಪು.59.
22. ರೈಸ್.ಬಿ.ಎಲ್. (1903). *ಪೂರ್ವೋಕ್ತ.* ಶಾಸನ ಸಂಖ್ಯೆ 5,6,8,10,22.
23. ಅದೇ. ಶಾಸನ ಸಂಖ್ಯೆ 21,71,80,81,110,111,112.
24. ಅದೇ. ಶಾಸನ ಸಂಖ್ಯೆ 120.
25. ಅದೇ. ಶಾಸನ ಸಂಖ್ಯೆ 132.
26. ಅದೇ. ಶಾಸನ ಸಂಖ್ಯೆ 15.
27. ಅದೇ. ಶಾಸನ ಸಂಖ್ಯೆ 6.

28.ಕೃಷ್ಣಮೂರ್ತಿ.ಪಿ.ವಿ. (1999). *ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು.* ಪು. 219,220.

29. ಅದೇ. ಸಂ. 222.

30.ರೈಸ್. ಬಿ.ಎಲ್. (1903). *ಪೂರ್ವೋಕ್ತ.* ಶಾಸನ ಸಂಖ್ಯೆ– 101.

31. ಅದೇ. ಶಾ.ಸಂ.120.

32.ಕೃಷ್ಣಮೂರ್ತಿ.ಪಿ.ವಿ. (1999). *ಪೂರ್ವೋಕ್ತ.* ಪು. 208.

**ಪರಾಮರ್ಶನ ಗ್ರಂಥಗಳು**

- ಬಾಗೂರು ನಾಗರಾಜಪ್ಪ. (2018). *ಹೊಸದುರ್ಗ ತಾಲೂಕು ಗ್ಯಾಸೆಟಿಯರ್.* ಕರ್ನಾಟಕ ಸರ್ಕಾರ.
- ಚಿದಾನಂದ ಮೂರ್ತಿ.ಎಂ. (2011). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್ ಹೌಸ್.
- ಕಲಬುರ್ಗಿ. ಎಂ.ಎಂ. (ಸಂ.) (1999). *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ.
- ಕಲಬುರ್ಗಿ.ಎಂ.ಎಂ. (2012). *ಸಿರುಮನ ಸಾಂಗತ್ಯಗಳು.* ಸ್ವಪ್ನ ಬುಕ್ ಹೌಸ್.
- ರೈಸ್ ಬಿ.ಎಲ್. (1903). *ಎಪಿಗ್ರಾಫಿಯಾ ಕರ್ನಾಟಿಕ.* ಸಂ–11, ಸರ್ಕಾರಿ ಕೇಂದ್ರೀಯ ಮುದ್ರಣ.
- ರೈಸ್ ಬಿ.ಎಲ್. (1904) *ಎಪಿಗ್ರಾಫಿಯಾ ಕರ್ನಾಟಿಕ*–ತುಮಕೂರು. ಸಂ–12, ಸರ್ಕಾರಿ ಕೇಂದ್ರೀಯ ಮುದ್ರಣ.
- ಶೈಲಜಾ, ಹೊಸಳ್ಳೇರ. (2012). *ಬೂದಿಹಾಳು ಪಾಳೇಯಗಾರ ಸಿರುಮನನಾಯಕ.* ರೋಹಿಣಿ ಎಂಟರ್‌ಪ್ರೈಸಸ್.